

ಗೋವಾದ ಕಡಲ ಕಿನಾರೆಯಲ್ಲಿ ಡೆಸ್ಟಿನೇಷನ್ ವೆಡ್ಡಿಂಗ್‌ಗಾಗಿ ಸಿದ್ಧಪಡಿಸಿದ ವೇದಿಕೆ

ಸಿಮಾ–ಶಂಕರ್ ಕಾಲೇಜು ದಿನಗಳಿಂದಲೇ ಸ್ನೇಹಿತರು. ಸ್ನೇಹ ಪರಸ್ಪರ ಪ್ರೇಮಕ್ಕೆ ತಿರುಗಿ ಮದುವೆಯಾಗುವ ನಿರ್ಧಾರಕ್ಕೂ ಬಂದವರು. ಕಾಲೇಜು ಮುಗಿಸಿ ಇಬ್ಬರೂ ಸಾಫ್ಟ್‌ವೇರ್ ಎಂಜಿನಿಯರ್ ವೃತ್ತಿ ಆರಂಭಿಸಿದ ಮೇಲೆಯೇ ಮದುವೆ ಎಂಬುದು ಇಬ್ಬರ ನಡುವಿನ ಒಪ್ಪಂದ. ಅಂತೂ ಒಳ್ಳೆಯ ಸಂಬಳ ಬರುವ ಕಂಪನಿಗಳಲ್ಲಿ ಉದ್ಯೋಗವೂ ಸಿಕ್ಕಿತು. ಈಗ ಮದುವೆಯ ವಿಚಾರ ಮುನ್ನೆಲೆಗೆ ಬಂತು. ಮದುವೆಯನ್ನು ಮನೆಯಲ್ಲಾಗಲಿ, ಕಲ್ಯಾಣ ಮಂಟಪದಲ್ಲಾಗಲಿ ಮಾಡಿಕೊಳ್ಳುವುದು ಬೇಡ. ಯಾವುದಾದರೂ ವಿಹಾರ ತಾಣದಲ್ಲಿ ಮಾಡೋಣ. ಎರಡೂ ಮನೆಯವರ ಆಪ್ತರನ್ನು, ಅತಿ ಸಮೀಪದ ಬಂಧುಗಳನ್ನು ಮಾತ್ರ ಕರೆಯೋಣ ಎಂದು ನಿರ್ಧರಿಸಿದರು. ಕೊನೆಗೆ ಇಬ್ಬರಿಗೂ ಇಷ್ಟವಾದ ಕಡಲ ಕಿನಾರೆಯಲ್ಲೇ ಮಾಡಿಕೊಳ್ಳೋಣ ಎಂಬುದು ಎರಡು ಮನೆಯವರಿಗೂ ಒಪ್ಪಿತವಾಯಿತು. ಮನೆಮಂದಿಯೊಂದಿಗೆ ಚರ್ಚಿಸಿ ಗೋವಾ ಬೀಚ್‌ನಲ್ಲಿ ಸಮಾರಂಭ ಏರ್ಪಡಿಸಿ ವಿಹಾರ ತಾಣದಲ್ಲೇ ವಿವಾಹ ಬಂಧನಕ್ಕೊಳಗಾದರು.

***

ಕಾಲ ಬದಲಾಗಿದೆ. ಎಲ್ಲ ಕ್ಷೇತ್ರಗಳಿಗೂ ಬದಲಾವಣೆ ಗಾಳಿ ಬೀಸಿದಂತೆ, ಮದುವೆ ಸಮಾರಂಭವೂ ಹೊಸತನಕ್ಕೆ ಆತುಕೊಂಡಿದೆ. ಮದುವೆ ಮಾಡಿಕೊಳ್ಳಲು ಕಲ್ಯಾಣ ಮಂಟಪವನ್ನು ಆಶ್ರಯಿಸುತ್ತಿದ್ದವರಲ್ಲಿ ಶ್ರೀಮಂತ ವರ್ಗ ಈಗೀಗ ರೆಸಾರ್ಟ್, ವ್ಯೂ ಪಾಯಿಂಟ್‌ಗಳನ್ನು ವಿವಾಹಕ್ಕೆ ಆಯ್ಕೆ ಮಾಡಿಕೊಳ್ಳಲಾರಂಭಿಸಿದ್ದಾರೆ. ಮದುವೆ ವೈಶಿಷ್ಟ್ಯಪೂರ್ಣವಾಗಿರಲಿ, ಬಂಧು–ಬಳಗಕ್ಕೆ ಅಚ್ಚರಿ ಮೂಡಿಸುವಂಥ, ಅನನ್ಯ ಅನುಭವ ನೀಡುವಂಥ ರೀತಿಯಲ್ಲಿ ಮದುವೆ ನಡೆಯಲಿ, ನಿಸರ್ಗದ ಹಚ್ಚಹಸಿರಿನ ನಡುವೆ ನೈಸರ್ಗಿಕ ಮದುವೆ ಮಂಟಪ ನಿರ್ಮಿಸಿ, ಹಿನ್ನೆಲೆಯಲ್ಲಿ ಸಮುದ್ರದಲೆಗಳ ನಾದದೊಂದಿಗೆ ಮದುವೆ ನಡೆಯಬೇಕು... ಇಂಥ ಬೇಡಿಕೆಗಳು ಇಂದಿನ ನವಜೋಡಿಗಳಲ್ಲಿ ನಿಚ್ಚಳವಾಗಿವೆ. ಹೀಗಾಗಿಯೇ ಮದುವೆಯಲ್ಲೂ ಮಾರ್ಪಾಡುಗಳಾಗಿದ್ದು, ಮದುವೆ ಜೋಡಿಯ ಅಪ್ಪ–ಅಮ್ಮಂದಿರು ಇವೆಂಟ್ ಮ್ಯಾನೇಜರ್‌ಗಳನ್ನು ಬೆನ್ನುಹತ್ತಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

## ಬದಲಾಯಿತು ಮದುವೆಯ ವ್ಯಾಖ್ಯಾನ

ಹಿಂದಿನ ಕಾಲದಲ್ಲಿ ಮದುವೆ ಎನ್ನುವುದು ಎಷ್ಟು ಕೌಟುಂಬಿಕವೊ, ಅಷ್ಟೇ ಸಾಮಾಜಿಕವೂ ಆಗಿತ್ತು. ಹಳ್ಳಿ ಒಂದರಲ್ಲಿ ಮಗಳಿಗೆ ಮದುವೆ ನಿಕ್ಕಿಯಾಯಿತೆಂದರೆ ಇಡೀ ಊರಿಗೆ ಊರೇ ಸಂಭ್ರಮದಲ್ಲಿ ತೇಲಾಡುತ್ತಿತ್ತು. ಊರಿನ ಮಂದಿಯೆಲ್ಲ ಸೇರಿ ಮದುವೆಯ ಹಬ್ಬದ ಸಡಗರದಲ್ಲಿ ಮಿಂದು ಸಿದ್ಧತೆಯಲ್ಲಿ ತೊಡಗಿಕೊಳ್ಳುತ್ತಿದ್ದರು. ಮದುವೆ ಕಾರ್ಯ ಮುಗಿದು ಮಗಳನ್ನು 'ಮಡಿಲಕ್ಕಿ' ತುಂಬಿ ಗಂಡನ ಮನೆಗೆ ಕಳಿಸಿಕೊಡುವವರೆಗೂ ಎಲ್ಲರೂ ಭಾಗಿಯಾಗುತ್ತಿದ್ದರು. ಭಾರವಾದ ಹೃದಯದಿಂದ ಮನೆಮಗಳನ್ನು ಬೀಳ್ಕೊಡುತ್ತಿದ್ದರು. ಅಷ್ಟೊಂದು ಆತ್ಮೀಯತೆ, ಪ್ರೀತಿ ಅಲ್ಲಿತ್ತು.

ಮದುವೆ ಸಾಂಪ್ರದಾಯಿಕವೇ ಆಗಿರಲಿ, ಆಧುನಿಕವೇ ಆಗಿರಲಿ, ಮನೆಯ ಮುಂದೆ ಚಪ್ಪರ, ಹೂಗಳಿಂದ ಅಲಂಕಾರ, ತಳಿರು ತೋರಣ, ಮನೆ ತುಂಬ ನೆಂಟರಿಷ್ಟರು, ಬಂಧು–ಬಾಂಧವರು ಸೇರಿದರೆ ಅಲ್ಲಿ ಮದುವೆ ಮನೆ ಕಳೆಕಟ್ಟಿದಂತೆಯೇ. ಹಳ್ಳಿಗಳಲ್ಲಂತೂ ತೋಟದಿಂದ ತಂದ ಬಾಳೆ ಎಲೆ, ಬಾಳೆದಿಂಡು, ಬಾಳೆಕಂಬಗಳು, ತೆಂಗಿನಗರಿ, ಅಡಿಕೆ, ತೆಂಗಿನಕಾಯಿ, ಕಬ್ಬು, ವೀಳ್ಯದೆಲೆ, ಬಗೆ ಬಗೆಯ ಹೂವುಗಳು... ಇವೆಲ್ಲವನ್ನೂ ಮದುವೆ ಮನೆ ಅಲಂಕಾರಕ್ಕೆ, ಶುಭ ಕಾರ್ಯಕ್ಕೆ ಸಿದ್ಧಗೊಳಿಸುತ್ತಾರೆ. ಇವುಗಳಿಂದ ಚಪ್ಪರವೂ ವಿಜೃಂಭಿಸುತ್ತದೆ. ಮನೆಯಲ್ಲೂ ಹಬ್ಬದ ವಾತಾವರಣವಿದ್ದು, ನವಿರಾದ ಬಾಂಧವ್ಯವೂ ಸೃಷ್ಟಿಯಾಗುತ್ತದೆ. ಈಗಲೂ ಹಳ್ಳಿಗಳ ಕೆಲವು ಮನೆಗಳಲ್ಲಿ ಇದೇ ಸಂಪ್ರದಾಯ ಮುಂದುವರಿದಿದ್ದರೂ ಹೆಚ್ಚಿನ ಮನೆಗಳಲ್ಲಿ ಮದುವೆ ದಿಬ್ಬಣ ಕಲ್ಯಾಣ ಮಂಟಪಕ್ಕೆ ಸಾಗಿದೆ.

ಕಾಲಾನಂತರ ಮದುವೆ ಎಂಬುದು ದೊಡ್ಡ ಪ್ರಮಾಣದ ಕಾರ್ಯಕ್ರಮ ಆಗಿ ಪರಿವರ್ತನೆಯಾಯಿತು. ಮನೆಯಲ್ಲಿ ಮದುವೆ ಮಾಡಿಕೊಡಲು ಜಾಗ, ಇತರ ವ್ಯವಸ್ಥೆ ಮುಂತಾದ ಅನುಕೂಲದ ಕೊರತೆ ಕಾಣಿಸಿಕೊಳ್ಳಲಾರಂಭಿಸಿ